ಪದ್ಮಳಿಗೂ ಅಷ್ಟರಲ್ಲಿ ಬೊಮ್ಮಿಯ ಸ್ವರ ನಿಂತದ್ದು ಅರಿವಾಗಿ ಮನೆಯ ಕಂಪೌಂಡಿನ ಮರೆಯಲ್ಲಿಯೇ ಇಣುಕಲು ಪ್ರಾರಂಭಿಸಿದ್ದಳು. ಯಮುನಕ್ಕ ಬಂದುದನ್ನು ನೋಡಿ ಅದೇ ತಾನೇ ಹೊರಗೆ ಬರುತ್ತಿರುವಂತೆ ನಟಿಸಿ, 'ಏನು ಯಮುನಕ್ಕ?' ಎಂದು ಕೇಳಿದಳು.

'ಬೊಮ್ಮಿ ನನ್ನ ಮನೆಯ ಅಂಗಳದಲ್ಲಿ ಮತಿ ತಪ್ಪಿ ಬಿದ್ದಿದ್ದಾಳೆ. ನನಗೆ ಬೈಯುತ್ತಾ ಇದ್ದವಳು ಹಾಗೆಯೇ ಬಿದ್ದಿರಬೇಕು. ಸ್ವಲ್ಪ ನೋಡು ಬಾ.'

ಇಬ್ಬರೂ ಬೊಮ್ಮಿಯ ಬಳಿಗೆ ಬಂದು ಅವಳನ್ನು ಅಲುಗಾಡಿಸಿ ನೋಡಿದರು. ಪ್ರಾಣ ಹೋಗಿರಲಿಲ್ಲ. ಬೊಮ್ಮಿಯ ಎರಡೂ ಕೈಗಳನ್ನು ಯಮುನಕ್ಕ ಹಿಡಿದುಕೊಂಡು, ಎರಡೂ ಕಾಲುಗಳನ್ನು ಪದ್ಮ ಹಿಡಿದುಕೊಂಡು ಅರ್ಧ ಎತ್ತಿಕೊಂಡು, ಅರ್ಧ ಎಳೆದುಕೊಂಡು ಯಮುನಕ್ಕನ ಮನೆಯ ಮಾಡಿನ ನೆರಳಿನಲ್ಲಿ ಮಲಗಿಸಿದರು. ಯಮುನಕ್ಕ ಒಳಗಿನಿಂದ ಒಂದು ಗಿಂಡಿಯಲ್ಲಿ ನೀರು ತಂದು ಬೊಮ್ಮಿಯ ಮುಖ, ಕುತ್ತಿಗೆಗಳಿಗೆ ಚಿಮುಕಿಸಿದಳು. ಪದ್ಮ ತನ್ನ ಸೆರಗಿನಿಂದ ಗಾಳಿ ಹಾಕಿದಳು. ಬೊಮ್ಮಿ ಕಣ್ಣು ತೆರೆದು ಇವರನ್ನು ನೋಡುತ್ತಿದ್ದರೂ ಮಾತು ಹೊರಡುತ್ತಿರಲಿಲ್ಲ. ಬೊಮ್ಮಿಗೆ ಲಕ್ವ ಹೊಡೆದಿರಬೇಕೆಂದು ಪದ್ಮಳಿಗೆ ಯೋಚನೆ ಬಂತು.

'ನಮ್ಮ ಯಜಮಾನರ ಅಂಗಡಿಗೆ ಒಂದು ಫೋನ್ ಮಾಡುತ್ತೇನೆ. ಮಂಚಕಲ್ಲಿನಿಂದ ಒಂದು ರಿಕ್ಷ ಕಳಿಸಲಿ. ಆಸ್ಪತ್ರೆಗೆ ಅವರೇ ಸೇರಿಸಿಯಾರು' ಎಂದು ಹೇಳಿ ಪದ್ಮ ಫೋನ್ ಮಾಡಲು ಮನೆಗೆ ಹೋದಳು. ಫೋನ್ ಮಾಡಿ ಹಿಂದಿರುಗಿ ಬಂದು, 'ಇನ್ನು ಅರ್ಧ ಗಂಟೆಯೊಳಗೆ ರಿಕ್ಷ ಬರುತ್ತದೆ. ಬೊಮ್ಮಿಯನ್ನು ಹಿಡಿದುಕೊಂಡು ರಿಕ್ಷದಲ್ಲಿ ಕುಳಿತುಕೊಳ್ಳಲಿಕ್ಕಾದರೂ ನಾನು ಹೋಗಬೇಕಲ್ಲ, ಸೀರೆ ಉಟ್ಟುಕೊಂಡು ಬರುತ್ತೇನೆ' ಎಂದು ಹೇಳಿ ಮತ್ತೆ ಮನೆಗೆ ಹೋದಳು. ಯಮುನಕ್ಕ ಯಾವ ಭಾವನೆಯೂ ಇಲ್ಲದೆ ಮತ್ತೆ ತನ್ನ ಮನೆಯ ಜಗಲಿ ಹತ್ತಿ ಕುಳಿತಳು.

★★★

ರಿಕ್ಷದಲ್ಲಿ ಮಂಚಕಲ್ಲು ತಲುಪಿದ ಬೊಮ್ಮಿಯನ್ನು ಅನಂತಪದ್ಮನಾಭರಾಯರು ಒಂದು ಟ್ಯಾಕ್ಸಿ ಮಾಡಿ, ಇಬ್ಬರು ಯುವಕರನ್ನು ಜತೆ ಮಾಡಿ ಉಡುಪಿಯ ಸರಕಾರಿ ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಿದರು. ಅವರು ಅಂಗಡಿ ಬಂದ್ ಮಾಡಿ ಸ್ವತಃ ಹೋಗಲು ಸಾಧ್ಯವಿರಲಿಲ್ಲ. ಆ ದಿನ ಮಂಚಕಲ್ಲು ಸಂತೆ ಬೇರೆ. ಪದ್ಮಳೂ ಗಂಡನ ಜತೆಗೆ ಅಂಗಡಿಯಲ್ಲೇ ಕುಳಿತಳು. ಇನ್ನು ರಾತ್ರಿ ಒಟ್ಟಿಗೆ ಮನೆಗೆ ಮರಳಿದರಾಯಿತು ಎಂದು.

ಬೊಮ್ಮಿಗೆ ಪಾರ್ಶ್ವವಾಯು ಆಗಿದೆಯೆಂದು ವೈದ್ಯರು ಖಚಿತಪಡಿಸಿದರೆಂದು ಆಸ್ಪತ್ರೆಗೆ ಸೇರಿಸಿದ ಯುವಕರು ಹಿಂದಿರುಗಿ ಬಂದು ರಾಯರಿಗೆ ವರದಿ ಒಪ್ಪಿಸಿದರು.

ಇನ್ನು ಬೊಮ್ಮಿಯನ್ನು ಆಸ್ಪತ್ರೆಯಲ್ಲಿ ನೋಡಿಕೊಳ್ಳುವವರು ಯಾರು?

ಮನೆಗೆ ಬಂದ ಮೇಲೆ ಪದ್ಮ ತನ್ನ ಡೈರಿಯಲ್ಲಿ ಬರೆದಿದ್ದ ಬೊಮ್ಮಿಯ ಅಣ್ಣ ಶೇಖರ ಮತ್ತು ಅವನ ಮಕ್ಕಳ ಫೋನ್ ನಂಬರನ್ನು ಹುಡುಕಿ ಅವನಿಗೆ ಫೋನ್ ಮಾಡಿದಳು. 'ನಾವು ಹುಬ್ಬಳ್ಳಿಯಲ್ಲಿ ಇದ್ದೇವೆ ಪದ್ಮಕ್ಕ, ನಾನೊಂದು ಸಣ್ಣ ಕ್ಯಾಂಟೀನ್ ನಡೆಸುತ್ತಿದ್ದೇನೆ. ಬರುವ ಹಾಗಿಲ್ಲ. ದುಡ್ಡು ಬೇಕಾದರೆ ಸ್ವಲ್ಪ ಕಳಿಸಿಯೇನು. ನನ್ನ ಮನೆಯವಳಂತೂ ಬರಲಿಕ್ಕೇ ಇಲ್ಲ. ಬೊಮ್ಮಿ ಅವಳ ಮೇಲೆ ಕೈ ಮಾಡಿ ಮನೆಯಿಂದ ದೂಡಿದ್ದಲ್ವ? ಅಲ್ಲ, ಈ ಸಂದರ್ಭದಲ್ಲಿ ಅದೆಲ್ಲ ನೆನಪು ಮಾಡಬಾರದು. ಆದರೂ...' ಎಂದೆಲ್ಲ ಹೇಳಿ ಶೇಖರ ತಪ್ಪಿಸಿಕೊಂಡ.

ಅಲ್ಲದೆ, 'ಬೊಮ್ಮಿಯ ಗಂಡನ ಮನೆಯವರು ಉಳಿಪಾಡಿಯಲ್ಲಿ ಇದ್ದಾರೆ. ಅವರು ಯಾರಾದರೂ ಬರಬಹುದು, ಅವರಿಗೊಂದು ಮಾತು ಹೇಳಿ' ಎಂದು ಸಲಹೆಯನ್ನೂ ನೀಡಿದ.